ನಂ: ಪುರಸಭೆ/ಖ/ವಿವ/ 79/08-09 ಜಿಲ್ಲಾಧಿಕಾರಿಗಳ ಕಚೇರಿ, ಉ.ಕ.

ಕಾರವಾರ, ದಿನಾಂಕ: 04-05-2009

ವಿಷಯ :- ಪಟ್ಟಣ ಪಂಚಾಯತ ಅಂಕೋಲಾ 2008-09 ನೇ ಸಾಲಿನ ಕುರಿತು ಬಿಡುಗಡೆಯಾದ ಎಸ್.ಎಫ್.ಸಿ ಅನುದಾನದಲ್ಲಿ ಮಂಜೂರಾದ ಕ್ರಿಯಾ ಯೋಜನೆಯನ್ವಯ ಕೈಗೊಳ್ಳಲು ಪ್ರಸ್ತಾಪಿಸಿರುವ ಕಾಮಗಾರಿಗಳ ಟೆಂಡರ ದರ ಅನುಮೋದಿಸುವ ಕುರಿತು

ಓದಿದೆ :-1) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಅಂಕೋಲಾ ರವರ ಪತ್ರ ನಂ:ಪಪಂಅ:ಸಾಕಾವಿ:ವಿವ:2008-09:334 ದಿನಾಂಕ:25-02-2009

2) ಜಿಲ್ಲಾಧಿಕಾರಿಗಳು ಉ.ಕ. ಕಾರವಾರ ರವರ ಆದೇಶ ನಂ: ಸಮ ಸಂಖ್ಯೆ ದಿನಾಂಕ:26-9-2009

3) ಜಿಲ್ಲಾಧಿಕಾರಿಗಳು ಉ.ಕ. ಕಾರವಾರ ರವರ ಆದೇಶ ನಂ: ಸಮ ಸಂಖ್ಯೆ ದಿನಾಂಕ:25-11-2009

4) ಸರ್ಕಾರದ ಆದೇಶ ನಂ:ಯುಡಿಡಿ-59-ಟಿ.ಎಂ.ಎಸ್-2004 ದಿನಾಂಕ: 16-11-2004

**ಪ್ರಸ್ತಾವನೆ :-**

ಜಿಲ್ಲಾಧಿಕಾರಿಗಳು ಉ.ಕ. ಕಾರವಾರ ರವರ ಅನಂ (2) ರಲ್ಲಿ ಓದಲಾದ ಆದೇಶದನ್ವಯ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಅಂಕೋಲಾ ರವರಿಗೆ 2008-09 ನೇ ಸಾಲಿನ ಕುರಿತು ಬಿಡುಗಡೆಯಾದ ಎಸ್.ಎಫ್.ಸಿ ಅನುದಾನದಲ್ಲಿ ತಯಾರಿಸಿದ ಕ್ರಿಯಾಯೋಜನೆಗೆ ಮಂಜೂರಿ ನೀಡಲಾಗಿದೆ. ಹಾಗೂ ಅ.ನಂ (3) ರಲ್ಲಿ ಓದಲಾದ ಜಿಲ್ಲಾಧಿಕಾರಿಗಳ ಆದೇಶದನ್ವಯ 32 ಪ್ಯಾಕೇಜ್ ಕಾಮಗಾರಿಗಳ ಕುರಿತು ಕರೆದ ಟೆಂಡರ ದರ ಅಂಗೀಕರಿಸಲು ಮಂಜೂರಿ ನೀಡಲಾಗಿದೆ.

ಈಗ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಅಂಕೋಲಾ ರವರು ಅನಂ(1) ರಲ್ಲಿ ಓದಲಾದ ಪತ್ರದನ್ವಯ ರೂ. 16.35 ಲಕ್ಷ ವೆಚ್ಚದಲ್ಲಿ ಎರಡು ಪ್ಯಾಕೇಜ್ ಕಾಮಗಾರಿಗಳ ಕುರಿತು ಟೆಂಡರ ಕರೆದು ಟೆಂಡರ ದರ ಅಂಗೀಕರಿಸಲು ಮಂಜೂರಿ ನೀಡಲು ವಿನಂತಿಸಿರುತ್ತಾರೆ.

ಸಂಬಂಧಪಟ್ಟ ದಾಖಲೆಗಳನ್ನು ಪರಿಶೀಲಿಸಲಾಗಿ ಈ ಕುರಿತು ಮುಖ್ಯಾಧಿಕಾರಿಗಳು ಜನ ಮಾಧ್ಯಮ ದಿನ ಪತ್ರಿಕೆಯಲ್ಲಿ ಹಾಗೂ ಜಿಲ್ಲಾ ಟೆಂಡರ ಬುಲೆಟಿನ್‌ದಲ್ಲಿ ಟೆಂಡರ ಪ್ರಕಟಣೆಯನ್ನು ನೀಡಿರುತ್ತಾರೆ ಬಂದ ದರವಾರುಗಳ ವಿವರ ಈ ಕೆಳಗಿನಂತಿದೆ.

| ಅನಂ | ಕಾಮಗಾರಿಯ ವಿವರ | ಅಂದಾಜು ಮೊತ್ತ | ಟೆಂಡರ್‌ದಾರರ ಹೆಸರು | ನಿಡಿದ ದರ | ಒಪ್ಪಿಕೊಂಡ ದರ |
|---|---|---|---|---|---|
| 1 | ಕಚೇರಿಯ ಆವರಣದಲ್ಲಿ ರೆಸ್ಟರೂಮ್ ಮತ್ತು ಕಂಪ್ಯೂಟರ್ ರೂಮಗಳಿಗೆ ನೀರಿನ ವ್ಯವಸ್ಥೆಗಾಗಿ | 7.85 ಲಕ್ಷ | 1) ನಾಗೇಶ ನಾಯ್ಕ ಅಂಕೋಲಾ | 4% ಹೆಚ್ಚುವರಿ | ಉದಯ ನಾಯ್ಕ ಅಂದಾಜು ಪ್ರತಿಕೆ ದರದಂತೆ |
| | | | 2) ಉದಯ ನಾಯ್ಕ ಅಂಕೋಲಾ | ಅಂದಾಜು ಪ್ರತಿಕೆ ದರದಂತೆ | |
| 2 | ನೀರಿನ ವ್ಯವಸ್ಥೆಗಳಿಗಾಗಿ ಕೇಣಿ ಹೊನ್ನೆಕೇರಿ, ಆನಂದಗಿರಿ, ಕಂತ್ರಿ ಹಾಗೂ ಅಂಬಾರಕೊಡ್ಲ ಪ್ರದೇಶದಲ್ಲಿ 2 ಎಚ್.ಪಿ ಸಾಮರ್ಥ್ಯದ ಪಂಪ ಅಳವಡಿಸಿ ಸಿಸ್ಟನ್ ಟ್ಯಾಂಕ್ ನಿರ್ಮಾಣ | 8.50 ಲಕ್ಷ | 1) ಕೃಷ್ಣ ನಾಯ್ಕ ಅಂಕೋಲಾ | 2% ಹೆಚ್ಚುವರಿ | ಕುಮಾರ ನಾಯ್ಕ ಅಂದಾಜು ಪ್ರತಿಕೆ ದರದಂತೆ |
| | | | 2) ಕುಮಾರ ನಾಯ್ಕ ಅಂಕೋಲಾ | ಅಂದಾಜು ಪ್ರತಿಕೆ ದರದಂತೆ | |

ಸದ್ರಿ ತುಲನಾತ್ಮಕ ಯಾದಿಯನ್ನು ಪರಿಶೀಲಿಸಲಾಗಿ ಎರಡು ಪ್ಯಾಕೇಜ್ ಕಾಮಗಾರಿಗಳ ಕುರಿತು ಅಂದಾಜು ಪತ್ರಿಕೆ ದರ ಬಂದಿರುವದು ಕಂಡು ಬರುತ್ತದೆ. ದಿನಾಂಕ: 28-2-2009 ರಂದು ಜರುಗಿದ ಸಾಮಾನ್ಯ ಸಭೆಯಲ್ಲಿ ಇದಕ್ಕೆ ಅನುಮೋದನೆಯನ್ನು ನೀಡಲಾಗಿದೆ.

ಅ.ನಂ (4) ರಲ್ಲಿ ಓದಲಾದ ಸರ್ಕಾರದ ಆದೇಶದನ್ವಯ ಪಟ್ಟಣ ಪಂಚಾಯತಗಳಿಗೆ ರೂ. 5.00 ಲಕ್ಷ ಮೊತ್ತದ ಅಂದಾಜು ಪ್ರತಿಕೆ ಕುರಿತಂತೆ ಮಾತ್ರ ಟೆಂಡರ ದರ ಅಂಗೀಕರಿಸಲು ಅಧಿಕಾರವಿರುತ್ತಿದ್ದು, ಜಿಲ್ಲಾಧಿಕಾರಿಗಳು 100-00 ಲಕ್ಷದ ವರೆಗಿನ ಅಂದಾಜು ಪತ್ರಿಕೆ ಕುರಿತಂತೆ ಟೆಂಡರ ದರ ಅಂಗೀಕರಿಸಲು ಅಧಿಕಾರ ಹೊಂದಿರುತ್ತಾರೆ. ಕಾರಣ ಈ ಕೆಳಗಿನಂತೆ ಆದೇಶವನ್ನು ಮಾಡಿದೆ.

**<u>ಆದೇಶ :-</u>**

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಅಂಕೋಲಾ ರವರಿಗೆ 2008-09 ನೇ ಸಾಲಿನ ಕುರಿತು ಬಿಡುಗಡೆಯಾದ ಎಸ್.ಎಫ್.ಸಿ ಅನುದಾನದಲ್ಲಿ ರೂ.16.75 ಲಕ್ಷ ವೆಚ್ಚದಲ್ಲಿ ಪ್ರಸ್ತಾವನೆಯಲ್ಲಿ ನಮೂದಿಸಿದಂತೆ ಎರಡು ಪ್ಯಾಕೇಜ್ ಕಾಮಗಾರಿಗಳನ್ನು ಕೈಗೊಳ್ಳುವ ಕುರಿತು ಟೆಂಡರದಾರರು ನೀಡಿರುವ ಅಂದಾಜು ಪತ್ರಿಕೆ ದರವನ್ನು ಅಂಗೀಕರಿಸಲು ಮಂಜೂರಿ ನೀಡಿದೆ.

**<u>ನಿಬಂಧನೆಗಳು</u> :-**

ಸದ್ರಿ ಕಾಮಗಾರಿಗಳ ಕುರಿತು ಅಂದಾಜು ಪತ್ರಿಕೆಗಳನ್ನು ತಯಾರಿಸಿಕೊಂಡ ಜಿಲ್ಲಾಧಿಕಾರಿಗಳಿಂದ ಆಡಳಿತಾತ್ಮಕ ಮಂಜೂರಿ ಪಡೆಯತಕ್ಕದ್ದು.

**ಜಿಲ್ಲಾಧಿಕಾರಿ**
**ಉತ್ತರ ಕನ್ನಡ ಕಾರವಾರ**

ಪ್ರತಿ: 1) ಮುಖ್ಯಾಧಿಕಾರಿ ಪಟ್ಟಣ ಪಂಚಾಯತ ಅಂಕೋಲಾ ರವರಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.
2) ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು ಡಿಯುಡಿಸಿ ಕಾರವಾರ ರವರಿಗೆ